

ಮುಂದಾಗಿ ನಮ್ಮ ಮನೆ ಬಾಗಿಲುಗಳನ್ನೂ ಬಡಿದು; ವಿಚಾರಣೆ ನಡೆಸಿ; ಘಟನೆಯ ಪ್ರತ್ಯಕ್ಷ ಸಾಕ್ಷಿಗಳು ಎಂದು ಆ ಕೇಸಿನ ಜೊತೆಗೆ ಟ್ಯಾಗ್ ಮಾಡಿದ್ದರು. ಪ್ರಥಮ ಸಾಕ್ಷಿಯನ್ನಾಗಿ ವಿಚಾರವಾದಿ ಗೋವಿಂದನ ಮೇಲೆ ಆ ಹಲ್ಲೆಯ ಜೊತೆ ಏನೊ ನಂಟು ಮಾಡಿದ್ದರು. ಇದಾವುದಕ್ಕೂ ನನಗೂ ಸಂಬಂಧ ಇಲ್ಲ ಎಂದರೂ ಸ್ಟೇಷನ್‌ನಲ್ಲಿ ಕೂರಿಸಿ... ಪರಮಾನಂದ, ಬಂಡಾಯ ಪ್ರಾಧ್ಯಾಪಕ ಹಾಗೂ ನನ್ನ ಬಗ್ಗೆ ಅವರಿಗೆ ಬೇಕಾದ ರೀತಿಯಲ್ಲಿ ಮಾಹಿತಿ ಪಡೆದು ಗೋವಿಂದನನ್ನು ಅರೆ ಜೀವವಾಗಿಸಿದ್ದರು... ಯಾರ ತಪ್ಪನ್ನು ಯಾರೋ ಹೊರಬೇಕು; ಯಾರ ಊಸನ್ನು ಯಾರೊ ಕುಡಿಯಬೇಕು ಎಂದಾಗಿತ್ತು. ಬಂಡಾಯ ಪ್ರಾಧ್ಯಾಪಕರು ವಯೋವೃದ್ಧರಾಗಿದ್ದರು. ಪರಮಾನಂದನಿಗೆ ಹಾಲಿ ರಾಜಕಾರಣಿಗಳ ಅಭಯವಿತ್ತು. ನನಗೆ ಯಾವ ದೈವದ ಬಲವಿತ್ತೊ ಯಾರು ಕಾಪಾಡಿದ್ದರೊ... ಏನೊ... ಆತಂಕ ಏರುತ್ತಿತ್ತು. ಮರು ವಾರವೇ ಆ ಕೊಲೆ ಯತ್ನದ ಹಲ್ಲೆಯ ತರಾವರಿ ಸುದ್ದಿಗಳ ಕಲಸು ಮೇಲೋಗರ ಮಾಡಿ ವಾರ ಪತ್ರಿಕೆಯೊಂದರ ಕ್ರೈಮ್ ರಿಪೋರ್ಟರ್